ವಿಷಯವಾಗತೊಡಗಿದಳು. ಬೆಳಿಗ್ಗೆ ಎಷ್ಟು ಹೊತ್ತಿಗೆ ಏಳುತ್ತಾಳೆ, ಎಷ್ಟು ಹೊತ್ತಿಗೆ ಮಲಗುತ್ತಾಳೆ, ಎಲ್ಲವೂ ನಿಗೂಢವೆನ್ನಿಸುತ್ತಿತ್ತು. ಏಕೆಂದರೆ ದಿನದ ಯಾವ ಹೊತ್ತು ನೋಡಿದರೂ ಅವಳು ಒಳಾಂಗಳದ ಮೆಟ್ಟಲಲ್ಲಿ ಕುಳಿತು ಎತ್ತಲೋ ದೃಷ್ಟಿ ನೆಟ್ಟಿರುತ್ತಿದ್ದಳು. ಅದು ಬಿಟ್ಟರೆ ದೇವರ ಕೋಣೆಯಲ್ಲಿರುತ್ತಿದ್ದಳು. ಆ ದೇವರ ಕೋಣೆ ಬಾಗಿಲು ಸದಾ ಮುಚ್ಚಿರುತ್ತಿದ್ದುದರಿಂದ ಅದರೊಳಗೆ ನಾನೆಂದೂ ಪ್ರವೇಶ ಮಾಡಿರಲಿಲ್ಲ. ಬಾಗಿಲು ಹಾಕಿಕೊಂಡು ಅವಳು ಪೂಜೆ ಮಾಡುತ್ತಿದ್ದಳೊ ಇಲ್ಲಾ ಸುಮ್ಮನೆ ದೇವರ ಮುಂದೆ ಕುಳಿತು ತನ್ನ ನೋವು ಮರೆಯುತ್ತಿದ್ದಳೊ ಯಾರಿಗೆ ಗೊತ್ತು?

ಏಕೆಂದರೆ ದೇವರ ಕೋಣೆ ಬಾಗಿಲು ಹಾಕಿಕೊಂಡಳೆಂದರೆ ಅವಳು ದಿನವೆಲ್ಲಾ ಹೊರಗೇ ಬರುತ್ತಿರಲಿಲ್ಲ. ಯಾವುದಾದರೂ ಒಂದು ಹೊತ್ತಿನಲ್ಲಿ ಕಡೆಗಾದರೂ ಬಾಗಿಲು ತೆರೆದು ಅವಳ ದರ್ಶನವಾದರೆ ಅಂತಹ ಸಂದರ್ಭದಲ್ಲಿ ತೀರಾ ಅಸಹಜವೆನ್ನುವಷ್ಟು ದೊಡ್ಡ ಕುಂಕುಮವೊಂದು ಅವಳ ಹಣೆಯಲ್ಲಿ ರಾರಾಜಿಸುತ್ತಿರುತ್ತಿತ್ತು. ಇಡೀ ಮೈಗೆ ಢಾಳಾಗಿ ಗೋಚರಿಸಿ ನನ್ನಿಡೀ ದೇಹ ಅರ್ಥವಾಗದ ವಿಲಕ್ಷಣ ಭಾವದಿಂದ ತತ್ತರಿಸುತ್ತಿತ್ತು.

ಆಗೆಲ್ಲಾ ಎಲ್ಲವನ್ನೂ ವಿವರಿಸಿ ಅಮ್ಮನಿಗೊಂದು ಸುದೀರ್ಘ ಪತ್ರ ಬರೆಯುತ್ತೇನೆಂದು ಕೋಣೆಯಲ್ಲಿ ಗಂಟೆಗಟ್ಟಲೆ ಬಾಗಿಲು ಹಾಕಿಕೊಂಡು ಕುಳಿತರೂ ಏನೂ ಬರೆಯಲಾಗದ ಸ್ಥಿತಿಯಲ್ಲಿ ತೊಳಲಾಡುತ್ತಿದ್ದೆ. ನಾ ಕಂಡಿದ್ದೇನೆಂದು ನನಗೇ ಅರ್ಥವಾಗದೆ, ಬರೆಯಲು ಸೂಕ್ತ ಪದಗಳೇ ಸಿಗದೆ ವಿನಾಕಾರಣ ನಡುಗುವ ಕೈಯನ್ನೇ ನಿಟ್ಟಿಸುತ್ತಾ ಮೂಕಳಾಗಿ ಕೂತಿರುತ್ತಿದ್ದೆ.

ಆಗಾಗ ಊರಿನಿಂದ ಅಪ್ಪನ ಪತ್ರವೇನೋ ಬರುತ್ತಿರುತ್ತಿತ್ತು. ಆ ಪತ್ರಗಳು ಅವಳ ಕೈಗೇ ಹೇಗೆ ಸಿಗುತ್ತಿತ್ತೋ ತಿಳಿಯದು. ಕಾಲೇಜಿನಿಂದ ನಾ ಬರುತ್ತಿದ್ದ ಹಾಗೆ ಚಾಚೂ ತಪ್ಪದೆ ಆ ಪತ್ರವನ್ನು ನನ್ನ ಕೈಯಲ್ಲಿಡುತ್ತಿದ್ದಳು. ಎಷ್ಟೋ ಸಲ ಪೋಸ್ಟ್‌ಮ್ಯಾನ್ ಪತ್ರ ಕೊಟ್ಟು ಹೋದ ಕ್ಷಣದಿಂದ ಆ ಪತ್ರವನ್ನು ಕೈಯಲ್ಲಿ ಹಿಡಿದುಕೊಂಡು ಅವಳು ನನಗಾಗಿ ಕಾಯುತ್ತಾ ಇದೇ ಮೆಟ್ಟಲ ಮೇಲೆ ಕುಳಿತಿರುತ್ತಿದ್ದಳೇನೋ ಎಂದು ಅನ್ನಿಸುತ್ತಿದ್ದದ್ದೂ ಇತ್ತು. ಹಾಗಂತ ಅವಳೆಂದೂ ಪತ್ರದಲ್ಲೇನಿದೆಯೆಂದು ವಿಚಾರಿಸುತ್ತಿರಲಿಲ್ಲ. ಮತ್ತು ಮರುಕ್ಷಣ ನನ್ನ ಕೋಣೆಗೋಡಿ ಕಾತುರದಿಂದ ಪತ್ರ ಒಡೆದು ಓದುತ್ತಿದ್ದ ನನಗೂ ಪತ್ರದಲ್ಲೇನಿಲ್ಲವೆನ್ನಿಸಿ, ಪೆಚ್ಚೆನ್ನಿಸುತ್ತಿದ್ದುದೇ ಜಾಸ್ತಿ. ಪ್ರತಿ ಪತ್ರದಲ್ಲೂ ಹೇಗಿದ್ದಿ, ಏನೆಂದು ಅಪ್ಪನ ಅವವೇ ಕ್ಷೇಮ ಸಮಾಚಾರಗಳ ಒಂದೆರಡು ಸಾಲುಗಳ ನಂತರ, ಕೆಳಗೆ ಅವವೇ ಉಪದೇಶಗಳ ಆಣಿಮುತ್ತುಗಳನ್ನು ಚಂದದ ಒಕ್ಕಣೆಯಲ್ಲಿ ಮುದ್ರಿಸಿ ಅಮ್ಮ ಮತ್ತೊಂದು ನಾಲ್ಕು ಸಾಲು ಜಾಸ್ತಿ ಸೇರಿಸಿರುತ್ತಿದ್ದಂತಹ ಪತ್ರಗಳವು. ನಾನೇನು ನಿರೀಕ್ಷಿಸುತ್ತಿದ್ದೆನೆಂದು ತಿಳಿಯದಿದ್ದರೂ ಪತ್ರ ಓದಿದ ಪ್ರತಿ ಕ್ಷಣವೂ ಕಣ್ಣು ಒದ್ದೆಯಾಗುತ್ತಿತ್ತು. ಮನಸ್ಸು ಮೂಕವಾಗುತ್ತಿತ್ತು. ಪ್ರಾಯಶಃ ಅದೇ ಕಾರಣಕ್ಕೋ ಏನೋ ಆಯವ್ವನ ಮನೆಯಲ್ಲಿ ಕಳೆದ ದಿನಗಳ ಬಗ್ಗೆ ಅಮ್ಮನಲ್ಲಿ ನಾ ಕಡೆಗೂ ಹೇಳಿಕೊಳ್ಳಲಿಲ್ಲ.

ದಿನ ಕಳೆದಂತೆ ಆಯವ್ವ ಮಾತ್ರ ಆ ಮನೆಯಲ್ಲಿ ಇಲ್ಲ, ಮತ್ಯಾರೋ ಅಲ್ಲಿದ್ದಾರೆಂದು ನಂಗೆ ತೀವ್ರವಾಗಿ ಅನ್ನಿಸಲು ಶುರುವಾಯಿತು. ನನಗೆ ತಿಳಿದಂತೆ ಆಯವ್ವ ಹಜಾರ ದಾಟಿ ಹೊರ ರಸ್ತೆಗೆ ಕಾಲಿಟ್ಟದ್ದನ್ನೇ ನಾ ಕಂಡಿರಲಿಲ್ಲ. ಆದರೆ ದಿನಾ ಬೆಳಿಗ್ಗೆ ಮುಂಚೆಯೇ ಮನೆಯ ಹೊರ ಬಾಗಿಲನ್ನು ಯಾರೋ ಅಷ್ಟಗಲ ತೆರೆದಿಡುತ್ತಿದ್ದರು, ರಾತ್ರಿ ಎಷ್ಟೋ ಹೊತ್ತಿನ ನಂತರ ಆ ಬಾಗಿಲನ್ನು ಮತ್ಯಾರೋ ಮುಚ್ಚುತ್ತಿದ್ದರು. ಆಯವ್ವಳೊಬ್ಬಳೇ ಅಷ್ಟು ದೊಡ್ಡ ಬಾಗಿಲನ್ನು ಮುಚ್ಚುವುದಿರಲಿ, ಸರಿಸುವುದೂ ಸಾಧ್ಯವಿರಲಿಲ್ಲ. ಆಗೊಮ್ಮೆ, ಈಗೊಮ್ಮೆ ಮನೆ ಗುಡಿಸಿ ಸ್ವಚ್ಛಗೊಳಿಸಿದಂತೆಯೂ ಕಾಣಿಸುತ್ತಿರುತ್ತಿತ್ತು. ಅಡುಗೆಗೆ ಬೇಕಾದ ದಿನಸಿ, ತರಕಾರಿ ತಂದುಕೊಡಲಾದರೂ ಯಾರಾದರೂ ಬೇಕಲ್ಲವೇ? ಆದರೆ ಮನೆಯಲ್ಲಿ ಕೆಲಸದವರ್‍ಯಾರೂ ಓಡಿಯಾಡಿದ ಸುಳಿವಿರುತ್ತಿರಲಿಲ್ಲ. ಅಲ್ಲದೇ ವಾರಕ್ಕೊಮ್ಮೆ ನನ್ನ ಬಟ್ಟೆಗಳನ್ನು ನಾನೇ ಒಗೆದುಕೊಳ್ಳುತ್ತಿದ್ದೆ. ಆಗಲೂ ಕೂಡಾ ಆಯವ್ವ ಒಗೆಯಲು ಬೇರೆಯವರಿದ್ದಾರೆಂದು ಹೇಳುತ್ತಿರಲಿಲ್ಲ. ಅದೇ ಮೆಟ್ಟಲಲ್ಲಿ ಕುಳಿತು ಬಾವಿಕಟ್ಟೆಯ ಬಳಿ ನಾ ಬಟ್ಟೆ ಒಗೆಯುವುದನ್ನು ಸುಮ್ಮನೆ ನೋಡುತ್ತಿದ್ದಳು.

ರಾತ್ರಿಯಾಗುತ್ತಿದ್ದಂತೆ ಆ ಮನೆಯಲ್ಲಿ ರಹಸ್ಯವಾಗಿ ಏನೋ ಚಟುವಟಿಕೆಗಳು ಶುರುವಾಗುತ್ತಿದೆಯೆಂದು ಮೊದಲು ಸಣ್ಣಗೆ ಹುಟ್ಟಿಕೊಂಡಿದ್ದ ಅನುಮಾನ ದಿನ ಕಳೆದಂತೆ ಯಾಕೋ ಬಲವಾಗತೊಡಗಿತ್ತು. ಹಾಗಂತ ಏನೆಂದು ನಂಗೆ ಸ್ಪಷ್ಟವಾಗುತ್ತಿರಲಿಲ್ಲ. ಆ ಅಗಾಧ